ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ : 360(437)

2) ಸದಸ್ಯರ ಹೆಸರು : ಶ್ರೀ ಬಿ.ಕೆ. ಹರಿಪ್ರಸಾದ್ (ಮಾನ್ಯ ವಿಧಾನಸಭೆಯಿಂದ ಚುನಾಯಿತರಾದವರು)

3) ಉತ್ತರಿಸುವ ದಿನಾಂಕ : 04/02/2021

4) ಉತ್ತರಿಸುವ ಸಚಿವರ ಹೆಸರು : ಮಾನ್ಯ ಮುಖ್ಯ ಮಂತ್ರಿಗಳು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಕೆ.ಜಿ.ಐ.ಡಿ.ಯಲ್ಲಿರುವ ನೌಕರರ ಅತೀ ಮುಖ್ಯ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಸರ್ಕಾರದ ಆದೇಶ ಸಂಖ್ಯೆ:ಆಇ 74 ಕವಿಇ 2017, ದಿನಾಂಕ:22/10/2019ರಂತೆ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಸಂಪೂರ್ಣ ಗಣಕೀಕರಣಕ್ಕೆ ಸಂಬಂಧಿಸಿದಂತೆ, ಸಮಗ್ರ ಯೋಜನೆಗೆ ವಿಮಾ ಪಾಲಿಸಿ, ಸಾಲ ಮತ್ತು ದಾಖಲಾತಿಗಳ ಡಿಜಿಟಲೈಸೇಷನ್ ಕಾಮಗಾರಿಯನ್ನು ಸೆಂಟರ್ ಫಾರ್ ಸ್ಮಾರ್ಟ್ ಗೌವರ್ನೆನ್ಸ್ (ಸಿ.ಎಸ್.ಜಿ)ರವರಿಗೆ ನೀಡಲಾಗಿರುತ್ತದೆ. ಪ್ರಥಮ ಹಂತವಾಗಿ ಜನ್ಮ ದಿನಾಂಕ: 01/01/1965ಕ್ಕಿಂತ ಮೇಲ್ಪಟ್ಟ ಅಂದಾಜು 4.7 ಲಕ್ಷ ವಿಮಾದಾರರ 13.00 ಲಕ್ಷ ವಿಮಾ ಪಾಲಿಸಿಗಳ ಡಾಟಾ ಎಂಟ್ರಿ ಕಾರ್ಯವು ಮುಕ್ತಾಯಗೊಂಡಿರುತ್ತದೆ. ಎರಡನೇ ಹಂತದಲ್ಲಿ 1990-91ರಿಂದ ಇಲ್ಲಿಯವರೆಗಿನ ವಿಮಾದಾರರ ಪ್ರೀಮಿಯಂ ಮತ್ತು ಸಾಲದ ಕಂತುಗಳ ಡಾಟಾ ಎಂಟ್ರಿ ಕಾರ್ಯ ಪ್ರಗತಿಯಲ್ಲಿದೆ.
ಆ)	ಸರ್ಕಾರಿ ನೌಕರರ ನಿಯತಕಾಲಿಕ ಅವಧಿ ಮುಕ್ತಾಯದ ಕ್ಲೇಮುಗಳನ್ನು ಇತ್ಯರ್ಥಪಡಿಸುವಲ್ಲಿ ಮತ್ತು ಸಾಲ ನೀಡಿಕೆಯಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ

ಇ)	ಸರ್ಕಾರಿ ನೌಕರರ ಅವಧಿ ಮುಕ್ತಾಯದ ಕ್ಲೇಮುಗಳ ಇತ್ಯರ್ಥಪಡಿಸುವಿಕೆ ಮತ್ತು ಸಾಲ ನೀಡಿಕೆಯನ್ನು ತ್ವರಿತಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು?	ಸರ್ಕಾರಿ ನೌಕರರ ನಿಯತಕಾಲಿಕ ಅವಧಿ ಮುಕ್ತಾಯದ ಕ್ಲೇಮುಗಳು ಅನಗತ್ಯ ವಿಳಂಬವಿಲ್ಲದೇ ಡಿಸೆಂಬರ್, 2020ರ ಮಾಹೆಯಲ್ಲಿ ಶೇ.77 ಹಾಗೂ ಸಾಲ ನೀಡಿಕೆ ಪ್ರಕರಣಗಳು ಶೇ.92ರಷ್ಟು ವಿಲೇವಾರಿಯಾಗಿರುತ್ತವೆ.

ಸಂಖ್ಯೆ: ಆಇ 11 ಕವಿಇ 2021

(ಬಿ.ಎಸ್. ಯಡಿಯೂರಪ್ಪ)

ಮುಖ್ಯ ಮಂತ್ರಿ.